## ಅನುವಾದಿತ ಕತೆ

ಅಂಗಡಿಯಲ್ಲಿ ಗಿರಾಕಿಗಳು ಯಾರೂ ಇರಲಿಲ್ಲ. ಕಿರಾಣಿ ಅಂಗಡಿಯವ ಅವಳ ಕಿವಿಯ ಬಳಿ ಬಾಯಿ ಒಯ್ದು ಗಂಭೀರ ದನಿಯಲ್ಲಿ ಉಸುರಿದ: ''ದೇವರೆ, ದೇವರೆ, ನಿನ್ನ ಮತ್ತು ಅಬ್ದುಲ್ ಹಮೀದನ ನಡುವೆ ಏನಾದರೂ ಮನಸ್ತಾಪ ಇಲ್ಲವಷ್ಟೆ?''

ಆಕೆಗೆ ತನ್ನ ಬಗ್ಗೆ ಇನ್ನಷ್ಟು ಪಾಪ ಅನ್ನಿಸಿ ಮತ್ತೆ ಅಳತೊಡಗಿದಳು. ಮನಸ್ಸು ಸ್ತಿಮಿತಕ್ಕೆ ಬಂದಮೇಲೆ ಅಂದಳು: ''ಇಸಾ, ನೀನು ನನ್ನನ್ನು ಅರ್ಥಮಾಡಿಕೊಳ್ಳೋದಾದರೆ, ಯಾವತ್ತೂ ಹಮೀದನಿಗೆ ಹೇಳೊಲ್ಲ ಅನ್ನೋದಾದರೆ, ನಿನ್ನ ಹತ್ತಿರ ಒಂದು ಖಾಸಗಿ ವಿಷಯ ಮಾತಾಡಬೇಕಿದೆ. ಈ ವಿಚಾರ ಬೇರೆ ಯಾರ ಹತ್ತಿರವಾದೂ ಹೇಳಿದರೆ ಸೋಡಚೀಟಿ ಕೊಡ್ತೀನಿ ಅಂತ ಆತ ಹೇಳಿದ್ದಾನೆ!''

ಪಕ್ಕದ ಬೀದಿಯಲ್ಲಿ ವಾಸಿಸುವ ಕುಟುಂಬವೊಂದರ ಒಳಗುಟ್ಟನ್ನು ತಾನು ಅರಿಯುತ್ತಿದ್ದೇನೆಂದು ತಿಳಿದ ಇಸಾ ಆನಂದತುಂದಿಲನಾದ. ಆತನ ಮೈಯಲ್ಲಿ ಗಾಳಿ ತುಂಬಿತು. ತಾನು ತಿಳಿಯಲಿರುವ ಸುದ್ದಿಯನ್ನು ಸರಿಯಾಗಿ ಬಳಸಿಕೊಳ್ಳಲು ಆತ ಸಜ್ಜಾಗಿ ನಿಂತ. ತಕ್ಷಣವೆ ಕುರ್ಚಿಯೊಂದನ್ನು ಎಳೆದುಕೊಂಡು ಕಥೆಯ ಒಂದು ಅಕ್ಷರವೂ ಬಿಡದಂತೆ ಕೇಳಿಸಿಕೊಳ್ಳುವ ಅಂತರದಲ್ಲಿ ಕುಳಿತ. ಯಾರೂ ತಿಳಿಯದ ಒಡಪೊಂದನ್ನು ಒಡೆಯುವಂತೆ ಆಕೆ ಹೇಳಿದಳು: ''ವಿಷಯಾ ಏನೂಂದ್ರೆ, ನನ್ನ ದನಿಯನ್ನು ನಾನು ಕಂಡುಕೊಂಡಿದೀನಿ!'' ಅನಂತರ ನಡೆದ್ದನ್ನು, ಹಮೀದನೊಂದಿಗಿನ ಮಾತುಕತೆಯನ್ನು ತಿಳಿಸಿದಳು. ಆ ವ್ಯಕ್ತಿ ನಗಲಿಲ್ಲ, ತುಟಿಪಿಟಕ್ಕೆನ್ನಲಿಲ್ಲ. ಎಲ್ಲ ಹೇಳಿ ಮುಗಿಸಿದಮೇಲೆ ಅತ್ಯಂತ ಸಂಕೋಚದಿಂದ ಆಕೆ ಹೇಳಿದಳು: ''ನನ್ನ ಮಾತಿನ ಸತ್ಯ ತಿಳಿಯಬೇಕಾದರೆ ನನ್ನ ದನಿಯನ್ನು ಬೇಕಾದರೆ ಕೇಳು.'' ಆತ ಭಯದಿಂದ, ''ಅಯ್ಯೋಪಾಪ!'' ಎನ್ನುವ ಭಾವದಿಂದ ಅವಳತ್ತ ನೋಡುತ್ತ ಅಂದ: ''ದಯವಿಟ್ಟು ಆ ಪಾನಕ ಕುಡಿ, ಸಯೀದ.'' ಆದರೆ, ಸಯೀದಾ ಪಾನಕವನ್ನು ಮುಟ್ಟದೆ, ಕಟ್ಟಿದ ಕಿರಾಣಿ ಸಾಮಾನು ತೆಗೆದುಕೊಂಡು ಅಲ್ಲಿಂದ ಜಾಗ ಖಾಲಿಮಾಡಿದಳು. ಆ ಮಧ್ಯಾಹ್ನ ಇಬ್ಬರೂ ಊಟ ಮಾಡುವಾಗ ಹಮೀದ್ ಹೇಳಿದ: ''ಬರುವಾಗ ಬೆಂಕಿಪೊಟ್ಟಣ ಕೊಳ್ಳಲು ಇಸ್ಸಾ ಅಂಗಡಿಗೆ ಹೋಗಿದ್ದೆ.'' ಜತೆಗೆ, ಸಂಜೆ ತಾವಿಬ್ಬರೂ ಡಾಕ್ಟರರನ್ನು ಕಾಣಲು ಹೋಗುತ್ತಿರುವುದಾಗಿಯೂ, ಸಯೀದಾ ಸಿದ್ಧವಾಗಿರಬೇಕೆಂದೂ, ಸೇರಿಸಿದ.

ಅವರು ಮನೋವೈದ್ಯರ ಆಸ್ಪತ್ರೆ ಮುಟ್ಟುವ ವೇಳೆಗೆ ಸಯೀದಾ, ಗಂಡ ಹಮೀದನ ಸಲಹೆಯನ್ನು ಸಂಪೂರ್ಣವಾಗಿ ಒಪ್ಪಿಕೊಂಡಂತಿತ್ತು. ಆತ ಹೇಳಿದ್ದ:

''ಸಯೀದಾ, ನಾನು ನಿನ್ನನ್ನು ತುಂಬ ಪ್ರೀತಿಸ್ತೇನೆ. ನಿನಗಾಗಿ ಮತ್ತು ಮಕ್ಕಳಿಗಾಗಿ ಮಾತ್ರ ನಾನಿದನ್ನು ಮಾಡುತ್ತಿದ್ದೇನೆ! ಇದೊಂದು ಮಾನಸಿಕ ಕಾಯಿಲೆಯಷ್ಟೇ. ಅದಕ್ಕಾಗಿ ಬೇಸರಪಡುವ ಅಗತ್ಯವಿಲ್ಲ. ಅದೂ ಅಲ್ಲದೆ ಔಷಧ, ಉಪಚಾರ, ಪಥ್ಯ ಸರಿಯಾಗಿ ಪಾಲಿಸಿದರೆ ಬೇಗನೇ ಗುಣವಾಗುವಂಥದ್ದು.''

ಎಲ್ಲ ಸರಿಯಾದುದಕ್ಕೆ ಸಯೀದಾ ದೇವರಿಗೆ ನಮಿಸಿದಳು. ಅವಳ ದನಿಗೆ ಸಂಬಂಧಿಸಿದ್ದ ಈ ಕಥೆ ಬಹುಶಃ ಅತಿಯಾದ ಮನೆಕೆಲಸದ ಒತ್ತಡದಿಂದಲೋ, ಅಥವಾ ಮನಸ್ಸಿನಲ್ಲಿ ಅಡಗಿದ್ದ ಅರೆಬರೆ ಆಲೋಚನೆಗಳಿಂದಲೋ ಆಗಿದ್ದಿರಬಹುದು. ಪ್ರತಿ ಮನುಷ್ಯನ ಮನಸ್ಸಿನ ಆಳದಲ್ಲಿ ಅಳತೆಗೆ ಸಿಗದ ಅಗಾಧ ಸಮುದ್ರವೊಂದು ಹರಿಯುತ್ತಿರುತ್ತದೆ. ಆತ್ಮದ ಹರಹನ್ನು ಯಾರೂ ಶೋಧಿಸಲಾರರು; ದಯಾಮಯನಾದ ಆ ದೇವರು ಮಾತ್ರ ಮನುಷ್ಯನ ಒಳಬದುಕನ್ನು ತಿಳಿಯಬಲ್ಲವನಾಗಿದ್ದ.

''ದೊಡ್ಡ ಕಥೇನ ಸ್ವಲ್ಪದರಲ್ಲಿ ಹೇಳೋದಾದರೆ, ಸಯೀದಾ, ಮನುಷ್ಯನಿಗೆ ತಾನೇನು ಅಂತ ತಿಳಕೊಳ್ಳೋದು ಅಸಾಧ್ಯದ ಕೆಲಸ. ಡಾಕ್ಟರುಗಳು ಇರೋದೆ ಇಂಥ ಸಮಯದಲ್ಲಿ ಸಲಹೆ ಪಡೆಯೋದಕ್ಕೆ. ನಾನು ಎಷ್ಟೊಂದು ಆಧುನಿಕ ಶಿಕ್ಷಣವನ್ನು ಪಡೆದವನಾದರೂ, ಆ ದಯಾಮಯನಾದ ಸೃಷ್ಟಿಕರ್ತನ ಮೇಲೆ ಸ್ವಲ್ಪವೂ ನಂಬಿಕೆ ಕಡಿಮೆಯಾಗಿಲ್ಲ ಸಯೀದಾ. ನನಗೆ ಈ ದೇವದೂತರ ಕಥೆಗಳಲ್ಲಿ ಸೈತಾನರ ಪುರಾಣಗಳಲ್ಲಿ ನಂಬಿಕೆಯೇ ಇಲ್ಲ. ಯಾಕೆಂದರೆ, ದೇವರು, ಮನುಷ್ಯ ಮತ್ತು ದೇವದೂತರ ನಡುವಿನ ಅಂತರವನ್ನು ತೊಡೆದುಹಾಕಿದ್ದೇನೆ, ಎಂದು ಪವಿತ್ರಗ್ರಂಥದಲ್ಲಿ ಹೇಳಿದ್ದಾನೆ. ಹೀಗಾಗಿ, ನಾವೇಕೆ ಪ್ರಯತ್ನಿಸಬಾರದು,